# ಲಿಂಗಾಯತ ದರ್ಶನ

ISSN : 2456-6837 ಬಿಡಿ ಪ್ರತಿ ರೂ. ೨೦

ಸಂಪುಟ-೧೨ ಮಾರ್ಚ ೨೦೨೫ ಸಂಚಿಕೆ-೦೩.




ಅಭಿನಂದನೆಗಳು



ನಮ್ಮ ನಾಡಿನ ಹೆಸರಾಂತ ಗ್ರಂಥಾಲಯ ವಿಜ್ಞಾನಿ,
ಡಾ. ಎಸ್. ಆರ್. ಗುಂಜಾಳ ಅವರಿಗೆ
'ರಾಷ್ಟ್ರೀಯ ಬಸವ ಪುರಸ್ಕಾರ' ಪ್ರಶಸ್ತಿ


PRINCIPAL
K.L.E. Society's
Arts & Commerce College
GADAG-BETGERI-582101

...RDINATOR
...QAC
...& Commerce College
GADAG

॥ ಶ್ರೀ ಗುರು ಬಸವಲಿಂಗಾಯ ನಮಃ ॥

# ಲಿಂಗಾಯತ ದರ್ಶನ

ಮಾಸಿಕ

ಸಂಪುಟ : ೧೨  ಮಾರ್ಚ-೨೦೨೨  ಸಂಚಿಕೆ



ಮಾರ್ಗದರ್ಶಕ

ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

ಸಂಪಾದಕ

ಡಾ॥ ಎಸ್. ಜಿ. ಮಹಾದೇವಪ್ಪ

ಸಹ ಸಂಪಾದಕ

ಡಾ॥ ರಾಮಕೃಷ್ಣ ಮರಾಠೆ

ಸಂಪಾದಕ ಮಂಡಳಿ

| | |
|---|---|
| ಪ್ರೊ. ಶಶಿಧರ ತೋಡಕರ | ಡಾ॥ ಸಿ. ಕೆ. ನಾವಲಗಿ |
| ಶ್ರೀ ಆರ್. ಎಸ್. ಚಾಪಗಾವಿ | ಡಾ॥ ವಿ. ಎಸ್. ಮಾಳಿ |
| ಡಾ॥ ಬಸವರಾಜ ಜಗಜಂಪಿ | ಪ್ರೊ. ಜಿ. ಬಿ. ಹಳ್ಯಾಳ |
| ಡಾ. ಎಂ. ಎಸ್. ಹುಲ್ಲೊಳ್ಳಿ | ಶ್ರೀಮತಿ ನೀಲಗಂಗಾ ಚರಂತಿಮಠ |



ಪ್ರಕಾಶಕರು

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ-೫೯೦೦೦೦

ದೂ:[illegible] *email:basavaguru@rediffmail.com*

*Web: www.rudrakshimath.in*


## ಚಂದಾವಿವರ

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರುವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ ವಚನ ಅಧ್ಯಯನ ಕೇಂದ್ರ ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ "ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦" A/C 520101070638493 IFSC-UBIN0920908 ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

ಅಂತರಂಗದೊಳಗೆ...


* ಸಂಪಾದಕೀಯ
* ವಚನಾರ್ಥ-ಚಿಂತನ
  ಡಾ. ತೋಂಟದ ಸಿದ್ಧರಾಮ ಸ್ವಾಮಿಗಳು
* ಡೋಹರ ಕಕ್ಕಯ್ಯ
  ಡಾ. ಚೆನ್ನಕ್ಕ ಪಾವಟೆ
* ಭಾವ ಬಂಧು ಡಾ. ಎಸ್. ಆರ್. ಗುಂಜಾಳ
  ಡಾ. ಎಂ. ಎಸ್. ಚಾಂದಕವಟೆ
* ವಚನಗಳು ಶಾಸ್ತ್ರವೇ ಅಥವಾ ಕಾವ್ಯವೇ?
  ಡಾ. ಅಂದಯ್ಯ ಅರವಟಗಿಮಠ
* ಗಂಗಾಂಬಿಕೆಯ ಜೀವನ
  ಡಾ. ನಾಗೇಂದ್ರ ಆರ್. ಚಲವಾದಿ
* ಸ್ಪರ್ಶ ಅಸ್ಪರ್ಶ ಕೂಡಿ ಸಂಗಮಿಸಿದಾಗ
  ವೆಂಕಟೇಶ ಜನಾದ್ರಿ
* ವಚನಗಳಲ್ಲಿ ಗಣಿತ ದರ್ಶನ
  ಮಲ್ಲಿಕಾರ್ಜುನ ಯಾಳವಾರ
* ಕಾಯಕಕ್ಕೆ ಕಳೆಗಟ್ಟಿದ ನಿಜಶರಣೆ ಸಂಕವ್ವೆ
  ಡಾ. ಸ್ನೇಹಾ ಭೂಸನೂರ



ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖ... ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. -...

CO-ORDINATOR
IQAC
K.L.E.S' Arts & Commerce College
GADAG

PRINCIP...
K.L.E. Soci...
Arts & Commerc...
GADAG-BETGE...

# ವಚನಗಳು ಶಾಸ್ತ್ರವೇ ಅಥವಾ ಕಾವ್ಯವೇ?

• ಡಾ. ಅಂದಯ್ಯ ಅರವಟಗಿಮಠ

ವಚನ ಸಾಹಿತ್ಯದ ಓದನ್ನು ಅನೇಕ ಸಂಗತಿಗಳು
ಾವಿಸಿವೆ. ಚಳುವಳಿಗಳ ಮೂಲಕ ಹುಟ್ಟಿಕೊಂಡ
ಸಗನ್ನಡ ಸಾಹಿತ್ಯದ ಸಂದರ್ಭದಲ್ಲಂತೂ ಶರಣರ
ನಗಳನ್ನು ಓದುವ ಕ್ರಮ ಹಲವು ಪಲ್ಲಟಗಳನ್ನು ಕಂಡಿದೆ.
ಹಿತ್ಯ ವಿಮರ್ಶೆಯ ಮಾನದಂಡಗಳ ಮೂಲಕ ವಚನಗಳು
ಸಬಗೆಯ ಅರ್ಥವಿಸ್ತಾರ ಪಡೆದುಕೊಂಡವು. ಇದರ
ಣಾಮ ಸಕಾರಾತ್ಮಕವಾಗಿಯೇ ಇದೆ. ವಚನಗಳಲ್ಲಿನ
ೇಕ ಒಳಸಂಗತಿಗಳು ಮುನ್ನಲೆಗೆ ಬಂದವು. ನವೋದಯ
ತ್ತು ಪ್ರಗತಿಶೀಲರ ಸಂದರ್ಭದ ಬಹುಪಾಲು
ಂಪ್ರದಾಯಿಕ ನೆಲೆಯ ಬರಹಗಳು ವಚನಗಳ 'ಹಿರಿಮೆ-
ಮೆ' 'ವಿಶೇಷಣ'ಗಳಿಗೆ ಹೆಚ್ಚು ಒತ್ತು ನೀಡಿದ್ದಾಗಿಯೂ
ವೆಂಪು ಆದಿಯಾಗಿ ಕೆಲವರ 'ಸಾಹಿತ್ಯ' ರೂಪದ ಕುರಿತಾದ
ಶ್ನರಾಗ ಕೇಳುತ್ತದೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ
ಚನಗಳಲ್ಲಿನ ಸಾಹಿತ್ಯಕ ಅಂಶಗಳೇ ಕೇಂದ್ರಬಿಂದುಗಳಾದವು.
ಂಗ್ಲೀಷಿನ 'ನಿರಚನಾವಾದ' ಗಿರಡ್ಡಿ ಗೋವಿಂದರಾಜ,
.ಜಿ.ಕೃಷ್ಣಮೂರ್ತಿ, ರಾಜಗೋಪಾಲರಾವ್ ಅಂತಹವರ
ನ್ನಗಿತ್ತು. ದಲಿತ ಬಂಡಾಯ ಕಾಲಘಟ್ಟದಲ್ಲಂತೂ ಅಧುನಿಕ
ತ್ತು ಅಧುನಿಕೋತ್ತರ ಸಂದರ್ಭದ 'ಇಸಂ'ಗಳ ಹಿನ್ನಲೆಯಲ್ಲಿ
ಚನಗಳ ದಿಗ್ದರ್ಶನ ಸಾಧ್ಯವಾಯಿತು. ಸಾಂಪ್ರದಾಯಿಕ
ರ್ಮದ ವ್ಯಾಖ್ಯಾನಗಳಂತಿದ್ದ ವಚನಗಳನ್ನು ಇಲ್ಲಿ ಬದಿಗಿರಿಸಿ,
ಸಮುದಾಯಗಳ ಕುರಿತಾಗಿ ವಿವರಿಸಿಕೊಳ್ಳಲಾದ ವಚನಗಳು
ುನ್ನಲೆಗೆ ಬಂದವು. ಇಂತಹ ಹತ್ತಾರು ಅಧ್ಯಯನ
ಪಾಂತರಗಳನ್ನು ವಚನ ಸಾಹಿತ್ಯ ಹೊಂದಿದೆ.

ಮೇಲಿನ ಎಲ್ಲ ಕಾಲಘಟ್ಟಗಳಲ್ಲಿ ಮತ್ತು ಅವುಗಳ
ರ್ವದಿಂದಲೂ ವಚನಗಳು ಅನೇಕ ಪ್ರಶ್ನೆಗಳಿಗೆ
ುರುಗೊಂಡಿವೆ. ವಚನಗಳು ಶಾಸ್ತ್ರವೋ ಅಥವಾ
ವ್ಯವೋ ಎಂಬುದು ಅವುಗಳಲ್ಲಿ ಒಂದು. ವಚನಗಳು
ಟ್ಟಿದ ಕಾಲದಲ್ಲಂತೂ ಪ್ರೌಢಕಾವ್ಯಗಳನ್ನು ಹೊರತುಪಡಿಸಿ
ದವು ಕಾವ್ಯವೆಂದು ಗಣಿಸಲಾಗುತ್ತಿರಲಿಲ್ಲ. ಇದೇ
ನದಂಡ ವಚನಗಳ ಪ್ರಾರಂಭಿಕ ಅಧ್ಯಯನಗಳು ಕ್ವಚಿತ್ತಾಗಿ
ಮುಂದುವರೆಸಿದವು. ಇಲ್ಲಿ ವಚನಗಳ ಸಂಗ್ರಹ ಮತ್ತು ಸಂಪಾದನೆಯ ವೃತ್ತಿ ಮುಖ್ಯವಾಗಿತ್ತೇ ಹೊರತು, ಅವುಗಳ ರೂಪದ ಕುರಿತು ಹೆಚ್ಚು ಆಸಕ್ತಿ ವಿದ್ವಾಂಸರು ತಳೆಯಲಿಲ್ಲ. ವಚನಗಳನ್ನು ಧರ್ಮದ ಪರಿಕರಗಳಾಗಿ ನೋಡುವುದರಲ್ಲಿಯೇ ಅವರಿಗೆ ಹೆಮ್ಮೆ. ಸಾಹಿತ್ಯದ ಭಾಗವಾಗಿ, ಕಾವ್ಯವಾಗಿ ವಚನಗಳನ್ನು ಪರಿಗಣಿಸುವ ಇರಾದೆ ಇರಲಿಲ್ಲ.

ವಚನಗಳಲ್ಲಿನ ಸಾಹಿತ್ಯಕ ಅಂಶಗಳ ಕುರಿತಾಗಿ ಸಾಂಪ್ರದಾಯಿಕ ನೆಲೆಯ ಪ್ರಾರಂಭದ ಬರಹಗಳ ಒಟ್ಟಾರೆ ನಿಲುವುಗಳನ್ನು ಗಮನಿಸುವುದಾದರೆ 'ವಚನಕಾರರ ಪ್ರಧಾನ ಉದ್ದೇಶ ಸಾಹಿತ್ಯ ನಿರ್ಮಾಣವಾಗಿರಲಿಲ್ಲ. ಅವರು ಅಪ್ಪಟ ಸಮಾಜ ಸುಧಾರಕರು, ಲಿಂಗಾಯತ ಧರ್ಮಕ್ಕಾಗಿ ಶ್ರಮಿಸಿದವರು, ವಚನಕಾರರು ಸಾಹಿತಿಗಳಲ್ಲ, ಅವರು ರಚಿಸಿದ ವಚನಗಳು ಸಾಹಿತ್ಯವಲ್ಲ, ಅದು ಶಾಸ್ತ್ರ' ಎಂಬ ನಿಲುವನ್ನು ತಳೆದಿದ್ದವು. ಸಾಹಿತ್ಯದ ಪರಿಕರಗಳಾದ ಅಲಂಕಾರ, ಭಾಷೆ, ಶೈಲಿ, ತಂತ್ರಗಳನ್ನು ವಚನಗಳಿಗೆ ಪ್ರಾಸಂಗಿಕವಾಗಿ ಅನ್ವಯಿಸಿ ನೋಡುವ ಕ್ರಮ ಇಲ್ಲಿದೆ. ವಚನಗಳ ಹೆಚ್ಚುಗಾರಿಕೆಯನ್ನು ತೋರಿಸುವ ಸಾಧನವಾಗಿ ಮಾತ್ರ ಸಾಹಿತ್ಯಕ ಅಂಶಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇದರಾಚೆ ವಚನಗಳನ್ನು ಅಪ್ಪಟ ಶಾಸ್ತ್ರವೆಂದೇ ಪರಿಗಣಿಸಲಾಗಿದೆ. ಆಧುನಿಕತೆಯ ಪ್ರವೇಶದ ನಂತರದಲ್ಲಿ ವಚನಗಳು ಮುದ್ರಣ ಸ್ವರೂಪ ಪಡೆದಾಗಲೂ ವಚನಗಳು ಗದ್ಯವೇ, ಶಾಸ್ತ್ರವೇ, ಪದ್ಯವೇ ಎಂಬ ಗೊಂದಲ ಮುಂದುವರೆದಿದೆ. ಇ.ಪಿ.ರೈಸ್, ಫ. ಗು. ಹಳಕಟ್ಟಿ, ರಂ. ರಾ. ದಿವಾಕರ ಮೊದಲಾದವರು ವಚನಗಳನ್ನು ಶಾಸ್ತ್ರ, ಗದ್ಯ ಎಂಬಂತೆಯೇ ಗ್ರಹಿಸಿದರು. ಇದಕ್ಕನುಸಾರವಾಗಿಯೇ ತಮ್ಮ ಸಂಕಲನಗಳಲ್ಲಿ ವಚನಗಳನ್ನು ಗದ್ಯದ ಸಾಲುಗಳಂತೆ ಪ್ರಕಟಿಸಿರುವುದನ್ನು ಕಾಣಬಹುದು.

ವಚನಗಳನ್ನು ಕಾವ್ಯವೆಂದೇ ಪರಿಭಾವಿಸುವ ಕನ್ನಡ ವಿದ್ವತ್ ವಲಯವು ಇಂಗ್ಲೀಷ್ ಸಾಹಿತ್ಯದಿಂದ ಪ್ರಭಾವಿತಗೊಂಡಂತೆ ತೋರುತ್ತದೆ. ಅಲ್ಲಿನ ಸರಳ ಭಾಷೆ, ಲಯಾನ್ವಿತ ಛಂದಸ್ಸುಗಳನ್ನು ಒಳಗೊಂಡ ಭಾವಗೀತಗಳಿಗೆ

ಪನ್ಯಾಸಕರು, ಕನ್ನಡ ವಿಭಾಗ, ಕೆ.ಎಲ್. ಇ. ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಗದಗ



ORDINATOR
IQAC
& Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101



ಮನಸೋತು ಅಲ್ಲಿನ ಸಂಗತಿಗಳನ್ನೇ ವಚನಗಳಲ್ಲಿ ಹುಡುಕತೊಡಗಿದರು. ಅದು ಫಲಕಾರಿಯೂ ಆಯಿತು. ಜಗತ್ತಿನಾದ್ಯಂತ ರೂಪುಗೊಂಡಿದ್ದ ಆಧುನಿಕ ಸಿದ್ಧಾಂತಗಳ ವೈಚಾರಿಕ ಚೌಕಟ್ಟಿನೊಂದಿಗೆ ವಚನಗಳನ್ನು ಜೊತೆಗಿಟ್ಟು ನೋಡಿದಾಗ ವಚನಗಳು ಹೊಸತೆರನಾಗಿ ಅವರಿಗೆ ಕಂಡವು. ವಚನಗಳಲ್ಲಿನ ಅಚ್ಚಗನ್ನಡ ಬಳಕೆ, ಜನನುಡಿ ಬಳಕೆ ಮತ್ತು ಮಾಧುರ್ಯತೆ ಕಾರಣಕ್ಕಾಗಿ ವಚನಗಳು ಕನ್ನಡ ಭಾಷೆಯ ಅಸ್ಮಿತೆಯಾಗಿ ವಿದ್ವತ್ ಲೋಕಕ್ಕೆ ಕಂಡವು. ವಚನಗಳಲ್ಲಿ ಕಾವ್ಯಕ್ಕೆ ಇರಬೇಕಾದ ಎಲ್ಲ ಸಂಗತಿಗಳು ಇರುವದರಿಂದ ಅವುಗಳನ್ನು ಉತ್ತಮ ಕಾವ್ಯವೆಂದು, ಭಾವಗೀತೆಗಳೆಂದು, ಆತ್ಮಗೀತೆಗಳೆಂದು, ಆತ್ಮಚರಿತ್ರೆಗಳೆಂದು ಹೆಸರಿಸಲಾಯಿತು. ಹೀಗೆ ಅದುವರೆಗೂ ಶಾಸ್ತ್ರವೆಂದು ಕಾಣಲಾಗುತ್ತಿದ್ದ ವಚನಗಳನ್ನು ಸಾಹಿತ್ಯಕ ಮಾನದಂಡಗಳ ಮೂಲಕ ಪ್ರವೇಶಿಸುವ ತುರ್ತು ತೀವ್ರಗೊಂಡಿತು. ವಚನಗಳ ಸಾಹಿತ್ಯಿಕ ಸ್ವರೂಪದ ಬಗ್ಗೆ ಕನ್ನಡದ ಮುಖ್ಯನೆಲೆಯ ವಿದ್ವಾಂಸರಾದ ಎಂ.ಆರ್.ಶ್ರೀ, ಬಿ.ಎಂ.ಶ್ರೀ, ರಂ.ಶ್ರೀ.ಮುಗಳಿ, ಕುವೆಂಪು ಮುಂತಾದವರ ಸಾಂದರ್ಭಿಕ ಚರ್ಚೆಗಳು ಸಹ ವಚನಗಳ ಅರ್ಥವಂತಿಕೆಯನ್ನು ವಿಸ್ತರಿಸಿವೆ.

ಹೊಸ ಸಾಧನಗಳೊಂದಿಗೆ ಮರುಪ್ರವೇಶಗೊಂಡ ವಚನ ಅಧ್ಯಯನಗಳು ನಡೆಸಿದ ಹುಡುಕಾಟ ಮುಖ್ಯವಾದದ್ದು. ಸಾಹಿತ್ಯದ ಪರಿಕರಗಳೊಂದಿಗೆ ವಚನಗಳಿಗೆ ಮುಖಾಮುಖಿಗೊಂಡಾಗ ಹಲವು ಮಹತ್ವದ ಪ್ರಶ್ನೆಗಳು ಹುಟ್ಟಿಕೊಂಡವು. 'ಶರಣರಿಗೆ ತಾವು ಮಹತ್ವದ ಸಾಹಿತ್ಯಕ ರಚನೆಗಳಲ್ಲಿ ತೊಡಗಿದ್ದೇವೆ ಎಂಬ ಅರಿವು ಇತ್ತೇ, ವಚನಗಳು ಸಾಹಿತ್ಯ ಎಂದೇ ಪರಿಗಣಿತವಾದರೆ ಅವುಗಳ ಪ್ರಧಾನ ಉದ್ದೇಶವೇನಾಗಿತ್ತು, ವಚನಗಳ ರಚನೆಯ ಹಿಂದೆ ಇದ್ದ ಪ್ರೇರಕ ಅಂಶಗಳಾವವು' ಎಂಬ ಪ್ರಶ್ನೆಗಳು ಚರ್ಚೆಯ ಮುನ್ನೆಲೆಗೆ ಬಂದವು. ಇದೇ ಸಂದರ್ಭದಲ್ಲಿ ವಚನಕಾರರ ರಚನೆಗಳು ಸಾಹಿತ್ಯವೇ ಅಥವಾ ಶಾಸ್ತ್ರವೇ? ಎಂಬ ಚರ್ಚೆ ಮತ್ತಷ್ಟು ತೀವ್ರಸ್ವರೂಪ ಪಡೆದುಕೊಂಡಿತು. ಕೆಲವು ಅಧ್ಯಯನಕಾರರು ಮೇಲಿನ ಎರಡೂ ಧೋರಣೆಗಳನ್ನು ಒಪ್ಪಿ, ವಚನಗಳು ಸಾಹಿತ್ಯ ಅಥವಾ ಕಾವ್ಯವೂ ಹೌದು, ಶಾಸ್ತ್ರವೂ ಹೌದು ಎಂಬ ಸಮನ್ವಯ ದೃಷ್ಟಿಕೋನವನ್ನು ಸಾಧಿಸುತ್ತಾರೆ. ಈ ಕುರಿತಾಗಿ ವಚನ ಅಧ್ಯಯನಕಾರರು ನಡೆಸಿರುವ ಚರ್ಚೆಯನ್ನು ಮುಂದಿನ ಬರಹ ಚರ್ಚಿಸುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ವ್ಯವಸ್ಥಿತವಾಗಿ ಕನ್ನಡಿಗರ ಮುಂದಿಡುವ ಉತ್ಸಾಹದಲ್ಲಿದ್ದ ಆರ್. ನರಸಿಂಹಾಚಾರ್ ಅವರು ವಚನಕಾರರ ಕಾಲ, ಸ್ಥಳ ಅವರ ಕೃತಿಗಳನ್ನು ಕರ್ಣಾಟಕ ಕವಿಚರಿತೆಯಲ್ಲಿ ದಾಖಲಿಸಿರುವುದು ಕನ್ನಡಿಗರು ಮರೆಯಬಾರದ ಕಾರ್ಯ. ವಚನಗ... ಅವರು ತಳೆದಿರುವ ನಿಲುವು ಮುಖ್ಯವಾದ... ನರಸಿಂಹಾಚಾರ್ ಅವರಿಗೆ ವಚನಗಳನ್ನು... ರಚನೆಗಳೆಂದು, ವಚನಕಾರರನ್ನು ಸಾಹಿತಿಗಳೆಂದು... ಅವರಿಗೆ ಯಾವುದೇ ಗೊಂದಲ... ಉದಾಹರಣೆಯಾಗಿ ಅವರ 'ಕರ್ನಾಟಕ ಕವಿಚರಿ... ಸಂಪುಟವನ್ನು ಗಮನಿಸಿದಾಗ ಕೃತಿ ಪು... ಸಮಗ್ರವಾಗಿರುವ ಬರಹದಲ್ಲಿ ವಚನಕಾರರನ್ನು ... ಹೆಸರಿಸುವರು. ಕೆಲವು ವಚನಗಳನ್ನು ಮುಂ... ಉಲ್ಲೇಖಿಸುವರು. ಕೆಲವು ಮಾತುಗಳನ್ನು ಗಮನಿ... ಹನ್ನೆರಡನೆಯ ಶತಮಾನದಿಂದೀಚೆಗೆ ಹ... ಶತಮಾನದವರೆಗೆ ವೀರಶೈವ ಕವಿಗಳು ಕನ್ನಡ ... ವಿಶೇಷವಾಗಿ ಗ್ರಂಥಗಳನ್ನು ಬರೆಯಲಾರಂ... ಕಾಣುತ್ತದೆ. ಬಸವ, ಚೆನ್ನಬಸವ, ಸಿದ್ಧರಾಮ... ಲಿಂಗಾಯತ ಮತ ಗ್ರಂಥಗಳನ್ನು ಕನ್ನಡ... ಬರೆದುದರಿಂದ ಈ ಭಾಷೆಯ ಅಭಿವೃದ್ಧಿ... ಅವಕಾಶವುಂಟಾಯಿತು. ವೀರಶೈವ ಗ್ರಂಥಗಳ... ಚಂಪೂರೂಪವಾಗಿದ್ದರೂ ಪ್ರಾಯಶಃವಾಗಿ ಎಲ್ಲ... ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ–ಈ ರೂಪದಲ್ಲಿ... ಮಾತುಗಳು ಕನ್ನಡ ಭಾಷೆಯ ಬೆಳವಣಿಗೆಗ... ಕೊಡುಗೆ ಬಹುಮುಖ್ಯವೆಂದು ಸಾರುತ್ತವೆ. 'ವೀರಶೈ... ಎನ್ನುವ ಮಾತನ್ನು ಇಲ್ಲಿ ಗಮನಿಸಲೇಬೇಕು. ... ಧರ್ಮ ಮತ್ತು ಕನ್ನಡ ಸಾಹಿತ್ಯದ ಮೂಲಕ ವ... ನೋಡುವ ಕ್ರಮ ಇಲ್ಲಿದೆ.

ಆರ್. ನರಸಿಂಹಾಚಾರ್ ಅವರ ... ಇ.ಪಿ.ರೈಸ್ ಅವರು ಕೂಡ ತಮ್ಮ History of K... literature ಎಂಬ ಕೃತಿಯಲ್ಲಿ ವಚನಗಳನ್ನು ಸಾ... ಕರೆಯುವರು. ಇಲ್ಲಿನ The Vachana Litera... ಅಧ್ಯಾಯದಲ್ಲಿ ವಚನಗಳನ್ನು ಹೀಗೆ ಪರಿಚ... ಲಿಂಗಾಯತ ಪ್ರಸಾರವು ಹೊಸ ಪಂಥ ಒಂದನ್ನು... ಬಹುಸಂಖ್ಯೆಯ ಬರಹಗಾರರ ರಚನೆಗಳ ನೆರವು... ಈ ರಚನೆಗಳನ್ನು ವಚನಗಳು ಅಥವಾ ರಚನೆ... ಕರೆಯಲಾಗುತ್ತಿದ್ದು, ಇವು ವೀರಶೈವ ಸಾಹಿ... ಲಕ್ಷಣವಾಗಿದ್ದುವು. ಇವು ಸುಲಭವಾಗಿದ್ದು... ಅನುಪ್ರಾಸಯುಕ್ತ ಗದ್ಯದಿಂದಲೂ... ಅರ್ಥಮಾಡಿಕೊಳ್ಳಲು ವಿಶೇಷ ಅಧ್ಯ... ಅಗತ್ಯವಾಗುತ್ತಿರಲಿಲ್ಲ. ಇದಕ್ಕೆ ನಿಸ್ಸಂದೇಹವಾಗಿ... ಈ ಆಂದೋಲನದ ಜನಪ್ರಿಯತೆಯೇ ಕಾ... ಹದಿನಾಲ್ಕನೆಯ ಶತಮಾನದಲ್ಲಿ ಇಂಗ್ಲೆಂ...

ೀವನ ಮತಪ್ರಚಾರಕರು ಹಾಗೂ ಕ್ರಿಸ್ತನ ಸುವಾರ್ತೆಗಳು ಡಿದ ಪ್ರಭಾವಕ್ಕೆ ಇವನ್ನು ಹೋಲಿಸಬಹುದೆಂದು ುತ್ತದೆ. ರೂಪದಲ್ಲಿ ವಚನಗಳು ಅಡಕವಾಗಿ ಬಿಡಿಬಿಡಿ ಕಗಳಾಗಿದ್ದವು. ಇವುಗಳ ಕೊನೆಗೆ ಶಿವನನ್ನು ಪೂಜಿಸುವ ವುದಾದರೊಂದು ಸ್ಥಳೀಯ ಅಂಕಿತ ಇರುತ್ತಿದ್ದಿತು. ಯಲ್ಲಿ ಇವು ಹೃದಯಕ್ಕೆ ಸಮಾಂತರವೂ ಅಪ್ರತ್ಯಕ್ಷ ಕವೂ ಆಗಿ ನಾಟುವಂಥವು. ಇವು ಸಿರಿತನದ ಗರ್ವ, ರ್ಕವಾದ ಓದು ಮತ್ತು ಮತಾಚರಣೆಗಳು ಹಾಗೂ ಕಿನ ಅನಿಶ್ಚಿತತೆಗಳನ್ನ ಅಲ್ಲದೆ ಶಿವಭಕ್ತರ ಆಧ್ಯಾತ್ಮಿಕ ಗಳನ್ನು ಕುರಿತು ಇವೆ. ಪ್ರಾಪಂಚಿಕ ಐಶ್ವರ್ಯ ಹಾಗು ಮಾರಿತನಗಳನ್ನು ತ್ಯಜಿಸಬೇಕೆಂದೂ ಅಪ್ರಮತ್ತರಾಗಿ ಮತ್ತೆ ಪಂಚಿಕದಿಂದ ನಿರ್ಲಿಪ್ತರಾಗಿ ಶಿವನಿಗೆ ಶರಣು ಗಬೇಕೆಂದೂ ಇವು ಕರೆ ನೀಡುತ್ತವೆ. ಇವು ರ್ವಾದವಾದವು ಆದರೆ ಧ್ವರ್ಮನಿಷ್ಠವು ಖ್ಯಾನಾತ್ಮಕವೂ ಆಗಿ ಪೂರ್ಣವಾಗಿ ದುಂಬಿಸುವಂಥವಾಗಿವೆ. ಲಿಂಗಾಯತ ಗುರುಗಳು ಗೂ ತಮ್ಮ ಅನುಯಾಯಿಗಳಿಗೆ ಬೋಧಿಸುವಾಗ ಈ ನಗಳನ್ನು ಕಂಠಪಾಠವಾಗಿ ಒಪ್ಪಿಸುತ್ತಾರೆ ಎನ್ನುವಲ್ಲಿ ಾಯತ ಧರ್ಮದ ಪ್ರಸಾರಕ್ಕಾಗಿ ಹುಟ್ಟಿಕೊಂಡ ಗಳಾಗಿ ವಚನಗಳನ್ನು ನೋಡುವ ಕ್ರಮವಿದೆ. ಪಾಶ್ಚಾತ್ಯರ ರ್ ಮತ್ತು ಸಾಹಿತ್ಯ ರಚನೆಗಳೊಂದಿಗಿಟ್ಟು ನೋಡುವ ನ ಪರಿಪಾಠವಿದೆ.

ಲಿಂಗಾಯತ ಧರ್ಮದವರಾದ ಆರ್. ನರಸಿಂಹಾಚಾರ್ ೂ ಅನ್ಯದೇಶದ ವಿದ್ವಾಂಸರಾದ ಇ.ಪಿ.ರೈಸ್‌ರವರು ದಲ ಬಾರಿಗೆ ವಚನಗಳನ್ನು ಗಮನಿಸುವಾಗ ಅವುಗಳನ್ನು ತ್ಯವೆಂದೇ ಉಲ್ಲೇಖಿಸಿರುವುದು ಬಹುಮುಖ್ಯ ಸಂಗತಿ. ಲಿನ ಇಬ್ಬರೂ ವಿದ್ವಾಂಸರು ವಚನಗಳನ್ನು ಗ್ರಹಿಸುವಲ್ಲಿ ಸಾಹಿತ್ಯ ಹೌದೇ, ಅಲ್ಲವೇ ಎಂಬ ಯಾವುದೇ ಚರ್ಚೆಗೆ ವುದಿಲ್ಲ. ವಚನಗಳು ವೀರಶೈವ ಧರ್ಮತತ್ವಗಳನ್ನು ಹೊರಟಂತಿವೆ ಮತ್ತು ಕನ್ನಡ ಸಾಹಿತ್ಯ ಪರಂಪರೆಯ ತ್ಯ ಕೃತಿಗಳಿಗೆ ಧಾರ್ಮಿಕತೆಯ ಆಯಾಮ ಇದ್ದೇ ಇದೆ ಪೂರ್ವಕಲ್ಪನೆಗಳು ಇಂತಹ ಹೇಳಿಕೆಗಳ ಹಿಂದಿವೆ.

ಫ. ಗು. ಹಳಕಟ್ಟಿಯವರಿಗೆ ವಚನಗಳು ಇತರ ಪ್ರಾಚೀನ ಳಂತೆ ಧಾರ್ಮಿಕ, ಸಂಗತಿಗಳನ್ನು ಒಳಗೊಂಡ ಾಗಿಯೇ ಕಾಣುತ್ತವೆ. ನಿರ್ದಿಷ್ಟ ಧರ್ಮದ ತತ್ವಗಳನ್ನು ವ ಶಾಸ್ತ್ರಗಳಂತೆ ವಚನಗಳು ಅವರಿಗೆ ಕಂಡಿವೆ. ಇದರ ರವಾಗಿಯೇ ಪ್ರಾರಂಭಿಕ ಓದಿನಲ್ಲಿ ಧಾರ್ಮಿಕ ಮತ್ತು ತ್ಮಿಕತೆಯ ಸಂಬಂಧಿತವಾದ ವಚನಗಳು ಹೆಚ್ಚು ಖ್ಯತೆ ಗಳಿಸಿಕೊಂಡವು. ವಚನಗಳು ಧರ್ಮವನ್ನು ಬೋಧಿಸುವ ಆಕರಗಳೆನ್ನುವ ಹಿನ್ನಲೆಯಲ್ಲಿ ಹಳಕಟ್ಟಿಯವರು ವಚನಗಳನ್ನು 'ವಚನ ಶಾಸ್ತ್ರ' ಎಂದೇ ಗುರುತಿಸಿರುವುದನ್ನು ಕಾಣಬಹುದು. ಹೀಗೆ ಕರೆಯುವಾಗ, ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ಲೌಕಿಕ ಮತ್ತು ಅಲೌಕಿಕ ಗುಣಗಳನ್ನು ಹಳಕಟ್ಟಿಯವರು ಉದಾಹರಿಸುತ್ತಾರೆ. ಹಳಕಟ್ಟಿಯವರಿಗೂ ಕೂಡ ವಚನಗಳ ಸಾಹಿತ್ಯ ಗುಣಗಳ ಅರಿವಿತ್ತು, ಅವರೇ ಹೇಳುವ ಹಾಗೆ ವಚನ ಗ್ರಂಥಗಳು ಕನ್ನಡ ಭಾಷೆಯಲ್ಲಿ ಬಹು ಮಹತ್ವದ ಗ್ರಂಥಗಳಾಗಿವೆ. ಅವು ಒಂದು ಬಗೆಯ ವಾಙ್ಮಯವನ್ನೇ ಹುಟ್ಟಿಸಿರುತ್ತವೆಂದು ನಾವು ಹೇಳಬಹುದು ಎನ್ನುವಾಗ ಅವರಿಗೆ ವಚನಗಳು ಸಾಹಿತ್ಯ ಪ್ರಕಾರವಾಗಿಯೂ ಸಹ ಕಂಡಿವೆ. ಧರ್ಮಬೋಧಕಗಳಾಗಿಯೇ ವಚನಗಳನ್ನು ನೋಡುವುದರಲ್ಲಿ ಅವರಿಗೆ ಹೆಚ್ಚು ಆಸಕ್ತಿ. ಹಳಕಟ್ಟಿಯವರಿಗೆ ವಚನಗಳ ಸಾಹಿತ್ಯಕ ಮಹತ್ವದ ಕುರಿತಾಗಿ ಅರಿವಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇಂತಹ ಅರಿವು ಧರ್ಮದ ಹೆಚ್ಚುಗಾರಿಕೆಯನ್ನು ವಿಜೃಂಭಿಸಲು ಮೀಸಲಾಯಿತೇ ಹೊರತು ಅಲ್ಲಿನ ಸಾಹಿತ್ಯಿಕ ಮೌಲ್ಯಗಳತ್ತ ಹೊರಳಲಿಲ್ಲ. ವಚನಗಳನ್ನು ಸಾಹಿತ್ಯವೆಂದು ಕರೆದು ಕೆಲವು ವಚನಗಳನ್ನು ಉಲ್ಲೇಖಿಸುವ ಮಟ್ಟಿಗೆ ಅವರ 'ಸಾಹಿತ್ಯಿಕ ನೋಟ' ಸೀಮಿತವಾಗಿ ಬಿಡುತ್ತದೆ. ಹೀಗಿದ್ದಾಗಿಯೂ ಹಳಕಟ್ಟಿಯವರು ವಚನಸಾಹಿತ್ಯ ಕುರಿತಾಗಿ ನಿರ್ಮಿಸಿದ ತಾತ್ವಿಕ ಬುನಾದಿ ಮುಂದಿನ ಅನೇಕ ಅಧ್ಯಯನಕಾರರ ಮೂಲ ಚಿಂತನೆಗಳಾಗಿರುವುದು ಮುಖ್ಯ ಸಂಗತಿ.

ಕನ್ನಡ ಸಾಹಿತ್ಯ ಮಂದಿರದಲ್ಲಿ ವಚನ ವಾಙ್ಮಯಕ್ಕೆ ಪ್ರತ್ಯೇಕ ಸ್ಥಾನ ನೀಡುವುದು ಅಗತ್ಯವೆನ್ನುವ ಆರ್. ಆರ್. ದಿವಾಕರ ಅವರು 'ವಚನಶಾಸ್ತ್ರ ರಹಸ್ಯ' ಎಂಬ ಕೃತಿಯಲ್ಲಿ ವಚನಗಳ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹೀಗೆ ಬಹು ಆಯಾಮಗಳ ವಿಸ್ತೃತ ಚರ್ಚೆ ಮಾಡಿರುವರು. ವಚನಗಳನ್ನು ಸಾಹಿತ್ಯವೆಂದೇ ಪರಿಗಣಿಸಲಾಗಿದೆ. 'ವಚನ ವಾಙ್ಮಯ' ಎಂಬ ಶೀರ್ಷಿಕೆಯ ಅಡಿಯಲ್ಲಿ ವಚನಗಳ ಲಕ್ಷಣಗಳನ್ನು ಗುರುತಿಸುವ ಮತ್ತು ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ವಚನಗಳಲ್ಲಿನ ಸಾಹಿತ್ಯಕ ಅಂಶಗಳ ಕುರಿತಾಗಿ ಇಷ್ಟೊಂದು ವ್ಯಾಪಕವಾದ ಚರ್ಚೆ ಅದುವರೆಗೂ ನಡೆದಿರಲಿಲ್ಲ. ಶಿವಶರಣರು ಉಪಯೋಗಿಸಿದ ವಚನವೆಂಬುದು ಗದ್ಯದ ಒಂದು ರೂಪವೆ ಇರುವುದೆಂದು ಹೇಳಬೇಕಾಗುವುದು, ಒಮ್ಮೊಮ್ಮೆ ಹಲವು ವಚನಗಳಲ್ಲಿ ಪ್ರಾಸ ಮುಂತಾದ ಪದ್ಯ ಲಕ್ಷಣಗಳು ಕಂಡುಬಂದರೂ ವಚನಗಳು ಎಂದಿಗೂ ಪದ್ಯಗಳೆಂದು ಎನಿಸಲಾರವು ಹೀಗೆ ವಚನ ವಾಙ್ಮಯ ಕುರಿತಾದ ಚರ್ಚೆಯಲ್ಲಿ ಆರ್. ಆರ್. ದಿವಾಕರ ಅವರು ವಚನಗಳ ಗುಣಲಕ್ಷಣಗಳನ್ನು ತಿಳಿಸುತ್ತಾ ಗದ್ಯವು

DINATOR
QAC
Commerce College
ADAG

PRINCIPAL
K.L.E. Society's
Arts & Commerce College
GADAG-BETGERI-582101



ವಿಚಾರಪ್ರಧಾನ ಮತ್ತು ಪದ್ಯ ಭಾವಪ್ರಧಾನವೆನ್ನುವ ಆಲೋಚನೆಯೊಂದಿಗೆ ವಚನಗಳು ಕನ್ನಡದ ಅಮೂಲ್ಯ ಗದ್ಯಗಳೆಂದೇ ಗುರುತಿಸುತ್ತಾರೆ.

ವಚನಗಳ ಧಾರ್ಮಿಕ ಸ್ವರೂಪದ ವ್ಯಾಖ್ಯಾನದತ್ತ ಹೆಚ್ಚು ಗಮನ ಹರಿಸುವ ಎಂ. ಆರ್. ಶ್ರೀನಿವಾಸಮೂರ್ತಿಯವರು ತಮ್ಮ 'ವಚನಧರ್ಮಸಾರ' ದಲ್ಲಿ ವಚನಗಳನ್ನು ಗದ್ಯದಂತೆ ಅಚ್ಚು ಮಾಡುತ್ತಾರೆ. ವಚನಗಳಲ್ಲಿ ಕಾವ್ಯಲಕ್ಷಣಗಳನ್ನು ಕುರಿತಾಗಿ ಚರ್ಚಿಸುವ ಒಂದು ಅಧ್ಯಾಯವೂ ಅವರ ಕೃತಿಯಲ್ಲಿದೆ. ಇಲ್ಲಿಯೂ ವಚನಗಳನ್ನು ಸಾಹಿತ್ಯವೆಂದು ಪರಿಗಣಿಸಬೇಕೆ, ಬೇಡವೇ ಎಂಬ ಚರ್ಚೆ ಮುಂದುವರೆದಿದೆ. ಕೊನೆಗೆ, ಶ್ರೀನಿವಾಸಮೂರ್ತಿಯವರು "ವಚನಗಳು ಧರ್ಮವನ್ನು ಬೋಧಿಸುವುದರಿಂದ ಧರ್ಮಗ್ರಂಥಗಳಾಗಿವೆ; ತತ್ವವನ್ನು ಬೋಧಿಸುವುದರಿಂದ ಸಿದ್ಧಾಂತ ಗ್ರಂಥಗಳಾಗಿವೆ. ಕಾವ್ಯಲಕ್ಷಣಗಳನ್ನು ಒಳಗೊಂಡಿರುವುದರಿಂದ ಉತ್ತಮ ಸಾಹಿತ್ಯ ಗ್ರಂಥಗಳು ಆಗಿವೆ" ಎಂಬ ಸಮನ್ವಯ ನಿಲುವಿಗೆ ಬರುತ್ತಾರೆ. ಈ ಗ್ರಂಥಕ್ಕೆ ಮುನ್ನುಡಿ ಬರೆದಿರುವ ಬಿ.ಎಂ.ಶ್ರೀಕಂಠಯ್ಯನವರೂ ಕೂಡ ಈ ನಿಲುವನ್ನು ಅನುಮೋದಿಸುತ್ತಾ ವಚನಗಳು ಶಾಸ್ತ್ರವೂ ಹೌದು; ಸಾಹಿತ್ಯವೂ ಹೌದು ಎನ್ನುವ ಮಾತುಗಳನ್ನಾಡುತ್ತಾರೆ ಇದೇ ಸಮನ್ವಯತೆ ರಂ. ಶ್ರೀ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಮುಂದುವರೆದಿದೆ. ಶ್ರೀನಿವಾಸಮೂರ್ತಿಯವರೇ ಕೃತಿಯ ಅಂತಿಮದಲ್ಲಿ "ವಚನಗಳಲ್ಲಿ ರಸಭಾವ ಅಲಂಕಾರಗಳೂ, ಉದಾತ್ತ ಧ್ಯೇಯವೂ ಇರುವುದರಿಂದ ಅವು ಉತ್ತಮ ಸಾಹಿತ್ಯವೆಂದು ಧಾರಾಳವಾಗಿ ಹೇಳಬಹುದು. ವಚನಗಳು ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು. ಆ ಕವಿಗಳು ನಮ್ಮ ಕನ್ನಡನಾಡಿನ ರಸಋಷಿಗಳು. ಆ ರಸ ಋಷಿಗಳ ಉಪದೇಶ ಸಾರ ; ಸಾಹಿತ್ಯವೇ ದರ್ಶನ, ದರ್ಶನವೇ ಸಾಹಿತ್ಯ ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ" ಎಂದು ಉತ್ಸಾಹದಿಂದ ಮಾತನಾಡುತ್ತಾರೆ. ಇಲ್ಲಿ ವಚನಕಾರರನ್ನು ಸಾಹಿತಿಗಳೆಂದು ಕರೆಯುವಾಗ ಕಾವ್ಯದ ಅನೇಕ ಲಕ್ಷಣಗಳನ್ನು ವಚನಗಳು ಒಳಗೊಂಡಿರುವ ಬಗೆಯನ್ನು ಸಹ ಅವರು ವಿವರಿಸುತ್ತಾರೆ. ವಚನಗಳು ಸಾಹಿತ್ಯವೆಂದೇ ಒಪ್ಪದ ಕಾಲದಲ್ಲಿ ವಚನಗಳಲ್ಲಿಯೂ ಕಾವ್ಯಾತ್ಮಕ ಅಂಶಗಳಿವೆ ಎಂಬುದನ್ನು ಶ್ರೀನಿವಾಸಮೂರ್ತಿಯವರು ಬಿಚ್ಚಿಟ್ಟರು.

CO-ORDINATOR
IQAC
K.L.E.S. Arts & Commerce College
GADAG

ಹಳಕಟ್ಟಿಯವರು ಅದುವರೆಗೂ ವಚ
ಗುಣಗಳನ್ನು ಪ್ರಾಥಮಿಕವಾಗಿ ಗುರುತಿಸಿದ್ದ
ದಿವಾಕರರು ಸಮಗ್ರ ಹಾಗೂ ವಿವರಣಾತ್ಮಕ
ಸಾಹಿತ್ಯಿಕ ಸ್ವರೂಪದ ಬಗ್ಗೆ ತಳಸ್ಪರ್ಶಿ ನೋ
ಮುಂದಿಟ್ಟರು. ಮುಂದಿನ ಅನೇಕ ವಿದ್ವಾಂಸ
ವಿಚಾರಗಳನ್ನೇ ತಳಹದಿಯನ್ನಾಗಿಸಿಕೊಂಡು
ಗದ್ಯಗಳೆಂದೇ ಪ್ರತಿಪಾದಿಸಿದ್ದಿದೆ. ಇಂತಹ
ಪಾರಂಪರಿಕವಾದ ಕಾವ್ಯಮಾರ್ಗದ
ವಚನಗಳಲ್ಲಿಯೂ ಕಾಣಸಿಗುವುದೆಂದು ಸಾ
ಅಂತಹ ಲಕ್ಷಣಗಳನ್ನು ಹುಡುಕಾಡಿ ವಚ
ಪ್ರಕಾರಕ್ಕೆ ಸೇರಿದ ರಚನೆಗಳೆಂಬ ಕೆಲವು ಕೂ
ರೂಪುಗೊಳ್ಳುವ ಹೊತ್ತು ಬಂದಿತು. ಇಲ್ಲಿ
ಕಾವ್ಯವೆಂದು ಸಾಧಿಸಲು ಬಳಸಿಕೊಂಡ ಮಾ
'ಹಿಂದಿನ ಕಾವ್ಯಗಳಲ್ಲಿರುವ ಯಾವ ಯಾವ ಗು
ವಚನಗಳಲ್ಲಿವೆ ಎಂಬ ಹುಡುಕಾಟ' ಮುಖ್ಯವಾ
ಲಯ, ಪ್ರಾಸ, ಸಂಗೀತ, ಸಮಾಂತರತ
ಪಾರಂಪರಿಕ ಕಾವ್ಯದ ಲಕ್ಷಣಗಳು ವಚನ
ಕಾಣಸಿಗುತ್ತವೆ ಎಂಬುದರ ಸುತ್ತ ಅಧ
ತಿರುಗಲಾರಂಭಿಸಿದವು.

ಇಂತಹ ಹುಡುಕಾಟದ ಮೊದಲ
ಬಸವನಾಳರ 'ಬಸವಣ್ಣನವರ ಷಟ್ಸ್ಥಲದ ವ
ಪ್ರಕಟಗೊಂಡಿತು. ವಚನಗಳನ್ನು ಇಂದು ಬ
ಕಾವ್ಯದ ರೂಪದಲ್ಲಿ ಮೊಟ್ಟ ಮೊದಲಿಗೆ ಪ್ರಕಟಿಸಿ
ಬಸವನಾಳರು ವಚನಗಳ ಸ್ವರೂಪದ ಕುರಿತಾಗಿ
"ವಚನಸಮೂಹ ಒಂದು ಶಾಸ್ತ್ರವೆಂಬ ಅ
ವೀರಶೈವ ಮತದ ಶಾಸ್ತ್ರವೆಂಬ ಅಭಿಪ್ರಾಯ ಸಾ
ಈ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿ
ವಚನಗಳಲ್ಲಿ ಸಾಹಿತ್ಯ ಲಕ್ಷಣಗಳು ವಿ
ಪರಿಪುಷ್ಟವಾಗಿವೆ ಎಂಬುದನ್ನು ಸಾಹಿತ್ಯಕೋ
ಹಿಡಿದು ಅವನ್ನು ಸಾಹಿತ್ಯಕೋಟಿಯಲ್ಲಿ ಪರಿ
ಎನ್ನುವ ಮೂಲಕ ವಚನಗಳನ್ನು ಸಾ
ಶಾಸ್ತ್ರವೆಂದೂ ಎರಡೂ ಬಗೆಯಲ್ಲಿ
ಪರಿಗಣಿಸಿರುವುದನ್ನು ಗುರುತಿಸಿ ಸಾಹಿತ್ಯವೆಂ
ಕ್ರಮವೇ ಸೂಕ್ತವೆನ್ನುತ್ತಾರೆ.

ಮುಂದುವರಿಯು

K.L.E. S
Arts & Commer
GADAG-BETG

INGAYAT DARSHAN MONTHLY

'Registered' RNI No. KARKAN/2013/52301 Date : 30.09.2013
Postal No. PMG-KA/NK/BM/105/23-25 Date : 26.11.2022
Posted at Belagavi Nehru nagar on 1st week of every month

Vol-12, Issue-03, March 2025, Page : 32+4,

ಶರಣ ಬಂಧುಗಳೇ,
"ಲಿಂಗಾಯತ ದರ್ಶನ"
ಪತ್ರಿಕೆಗೆ ಚಂದಾದಾರರಾಗಿರಿ

ಚಂದಾ ವಿವರ

| | |
|---|---|
| ಹಾಪೋಷಕರು | 10000–00 |
| ೋಷಕರು | 5000–00 |
| ೀವ | 3000–00 |
| ವರ್ಷ | 1000–00 |
| ದು ವರ್ಷ | 200–00 |



ಫೋನ್ ಪೇ ಮೂಲಕವೂ

* ಚಂದಾದಾರರಾಗಬಹುದು
* ಚಂದಾ ಅವಧಿ ನವೀಕರಿಸಬಹುದು
* (ಬಿಡಿ ಪ್ರತಿ ಮಾರಾಟವಿಲ್ಲ)

ಚಂದಾಹಣವನ್ನು ಕಾರ್ಯಾಲಯದಲ್ಲಿ ನಗದು ರೂಪದಲ್ಲಿ ನೀಡಿ ರಸೀದಿ ಪಡೆಯಬಹುದು.
ವಚನ ಅಧ್ಯಯನ ಕೇಂದ್ರ ಬೆಳಗಾವಿ ಈ ಹೆಸರಿನಲ್ಲಿ ಕ್ರಾಸ್ ಮಾಡಿದ ಚೆಕ್ ಅಥವಾ ಡಿ.ಡಿ. ಮೂಲಕವೂ ಕಳಿಸಬಹುದು.
ವಚನ ಅಧ್ಯಯನ ಕೇಂದ್ರ A/c. No. 520101070638493 Union Bank of India
IFSC-UBIN0920908

ವಿಳಾಸ : ನಿರ್ದೇಶಕರು, ವಚನ ಅಧ್ಯಯನ ಕೇಂದ್ರ, ನಾಗನೂರು ರುದ್ರಾಕ್ಷಿಮಠ, ಶಿವಬಸವನಗರ ಬೆಳಗಾವಿ–590010
ಮೊ. 9886757522

Containing Printed Book

To,

RDINATOR
IQAC
& Commerce College
GADAG

ner : Secretary siddharameshwar Shikshan Samsthe, Vachan Adhyayan Kendra Shivabasavanagar, Belgaum-590010 (Karnataka)
ter & Publisher : S.S. Kallolimath Secretary, siddharameshwar Shikshan Samsthe, Vachan Adhyayan Kendra Shivabasavanagar,
avi-590010 (Karnataka)
ed at : Shiva Offset Printers, Belgavi. Cell : 9448304550, Ph : 0831- 4204005
r: N.G. Mahadevappa Vachan Adhyayan Kendra Shivabasavanagar, Belgavi-590010
9886757522 e-mail: lingayatmonthly@gmail.com